ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು

CC No.564/2018 CW-1 PW-1

| | | |
|---|---|---|
| ಹೆಸರು | : | ಸೈಯದ್ ರಫಿವುದ್ದೀನ್ ಖಾದ್ರಿ |
| ತಂದೆಯ/ಗಂಡನ ಹೆಸರು | : | ಸೈಯದ್ ಅಬ್ದುಲ್ ಸತ್ತಾರ ಖಾಜಿ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸಸ್ಥಳ | : | ಸಿಂಧನೂರು |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 03-10-2023

ದೋಷಾರೋಪಣೆ ಪೂರ್ವ ಸಾಕ್ಷಿ ವಿಚಾರಣೆ.

ಮುಖ್ಯ ವಿಚಾರಣೆಃ ದೂರುದಾರರ ಪರ ವಕೀಲರಿಂದ

ಆರೋಪಿತರ ಪರಿಚಯ ಇದೆ. ನಾನು ಸಿಂಧನೂರಿನ ನೂರಾಣಿ ಮಸ್ಜಿದ್ ಕಮಿಟಿಯ ಸದಸ್ಯನಿದ್ದೇನೆ. ಅದಕ್ಕೆ ಮಸೂದ್ ಅಹಮ್ಮದ್ ಖಾದ್ರಿ ರವರು ಅಧ್ಯಕ್ಷರಿದ್ದಾರೆ. ಮಸೀದಿಗೆ ಜಾಗವನ್ನು ನೊಂದಾಯಿತ ಖರೀದಿ ಮೂಲಕ 1978 ರಲ್ಲಿ ಖರೀದಿ ಮಾಡಿದ್ದೇವೆ. ಅದರ ಅಳತೆ ಪೂರ್ವ-ಪಶ್ಚಿಮ 250 ಅಡಿ ಮತ್ತು ದಕ್ಷಿಣೋತ್ತರ 121 ಅಡಿ ಅಳತೆ ಇದೆ. ಖರೀದಿ ಪತ್ರದ ಆಧಾರದ ಮೇಲೆ ಪುರಸಭೆಯಲ್ಲಿ ಮ್ಯೂಟೇಶನ್ ಆಗಿದೆ.

ನಮ್ಮ ಮಸೀದಿಯ ಅಧ್ಯಕ್ಷರು ಉರ್ದು ಶಾಲೆ ಕಟ್ಟಡ ಕಟ್ಟಲು ಸರ್ಕಾರಕ್ಕೆ 15 X 80 ಅಳತೆಗೆ ಜಾಗವನ್ನು ನೋಂದಾಯಿತ ದಾನ ಪತ್ರದ ಮೂಲಕ ನೀಡಿದ್ದಾರೆ. ಆ ನೋಂದಾಯಿತ ದಾನ ಪತ್ರ ಆ ಶಾಲೆ ಮುಖ್ಯೋಪಾಧ್ಯಯರು ಅಥವಾ ಬಿಇಓ ರವರ ವಶದಲ್ಲಿ ಇರಬಹುದು. ಆ ದಾನಪತ್ರದಲ್ಲಿ ದಾನ ನೀಡಿದ ಜಾಗದ ಅಳತೆಯನ್ನು 15 X 80 ಇದುದ್ದನ್ನು 25 X 80 ಅಡಿ ಎಂದು ತಿದ್ದುಪಡಿ ಮಾಡಿದ್ದಾರೆ. ಈ ವಿಚಾರ ನಾನು ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಅರ್ಜಿ ನೀಡಿದ್ದರಿಂದ ಆ ತಿದ್ದುಪಡಿ ಮಾಡಿದ ದಾನಪತ್ರದ ನಕಲನ್ನು ನನಗೆ ನೀಡಿದ್ದರಿಂದ ಗೊತ್ತಾಗಿದೆ ಆ ದಾನಪತ್ರದ ನಕಲನ್ನು ಬಿಇಓ ರವರು ನೀಡಿದ್ದಾರೆ.

ನಮ್ಮ ತಂದೆ ಶಾಲೆಯ ಜಾವ ಅವರ ಜಾಗದಲ್ಲಿ ಬರುತ್ತದೆಎಂದು ಹೇಳಿ ಅಸಲು ದಾವಾ ನಂ. 100/2012 ನ್ನು ದಾಖಲಿಸಿದ್ದರು. ಆ ದಾವೆಯಲ್ಲಿ ಬಿಇಓ ಮತ್ತು ಶಾಲೆಯ ಮುಖ್ಯೋಪಾಧ್ಯಯರು ತಿದ್ದುಪಡಿ ಮಾಡಿದ ದಾನಪತ್ರದ ನಕಲನ್ನು ಹಾಜರಪಡಿಸಿದರು. ಆನಂತರ ನಾನು ನೋಂದಣಿ ಕಛೇರಿಗೆ ಆ ದಾನಪತ್ರದ ದೃಢೀಕೃತ ನಕಲನ್ನು ಕೇಳಿ ದೃಢೀಕೃತ ನಕಲನ್ನು ಪಡೆದುಕೊಂಡಿದ್ದೇನೆ. ಬಿಇಓ ರವರು ಮಾಹಿತಿ ಹಕ್ಕು ಅಡಿಯಲ್ಲಿ ನೀಡಿದ ದಾನಪತ್ರದ ನಕಲು ಪ್ರತಿಯನ್ನು ಮತ್ತು ನಾನು ನೋಂದಣಿ ಕಛೇರಿಯಿಂದ ಪಡೆದುಕೊಂಡ ದಾನಪತ್ರದ ದೃಢೀಕೃತ ನಕಲನ್ನು ನೋಡಲಾಗಿ ಬಿಇಓ ಕಛೇರಿಯವರು ನೀಡಿದ ದಾನಪತ್ರದಲ್ಲಿ ಅಳತೆ ತಿದ್ದುಪಡಿಯಾದ ಬಗ್ಗೆ ಕಂಡುಬಂತು.

ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ಶಾಲೆಯ ಕೊಠಡಿಯನ್ನು ಕಟ್ಟಲು ಬಿಡುಗಡೆಯಾದ ಅನುದಾನವನ್ನು ಪಡೆದುಕೊಳ್ಳಲು ಬಿಇಓ, ಆ ಶಾಲೆಯ ಮುಖ್ಯೋಪಾಧ್ಯಯರು ಮತ್ತು ಶಾಲಾ ಸುಧಾರಣಾ ಸಮಿತಿಯ ಸದಸ್ಯರು ಸೇರಿ ದಾನಪತ್ರವನ್ನು ತಿದ್ದುಪಡಿ ಮಾಡಿದ್ದಾರೆ. ಆ ಶಾಲಾ ಕಟ್ಟಡವನ್ನು ಹಂತ ಹಂತವಾಗಿ ಕಟ್ಟಡ ಮಾಡಿ ಅನುದಾನವನ್ನು ಬಳಿಸಿಕೊಳ್ಳದೇ ಒಂದೇ ತಿಂಗಳಿನಲ್ಲಿ ಕಟ್ಟಡ ಕಟ್ಟಿ ಸಂಪೂರ್ಣ ಹಣ ಬಿಡಿಸಿಕೊಂಡಿದ್ದಾರೆ.

ಈ ಬಗ್ಗೆ ನಾನು 2012 ರಲ್ಲಿಯೇ ಬಿಇಓ ರವರಿಗೆ ಪತ್ರ ನೀಡಿದ್ದೇನೆ ಆದರೆ ಅವರು ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಅನುದಾನದ ಹಣವನ್ನು ಎತ್ತಿ ಹಾಕುವ ಉದ್ದೇಶದಿಂದ ಈ ರೀತಿ ದಾನಪತ್ರವನ್ನು ತಿದ್ದುಪಡಿ ಮಾಡಿದ್ದಾರೆ.

ಆದ್ದರಿಂದ ಆರೋಪಿತರ ವಿರುದ್ಧ ಸೂಕ್ತ ಕ್ರಮ ಜರುಗಿಸಲು ಕೋರುತ್ತೇನೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>

ಶಾಲೆ ಕಟ್ಟಡ ಮಾಡಲು ಜಾಗ ದಾನ ಮಾಡಲು ಮಸೀದಿಯ ಸಮಿತಿಯಲ್ಲಿ ಠರಾವು ಮಾಡಿರುವುದಿಲ್ಲ. ಆ ದಾನಪತ್ರದ ಸಂದರ್ಭದಲ್ಲಿ ನಾನು ವೈಯಕ್ತಿಕವಾಗಿ ಇರಲಿಲ್ಲ. ದಾನಪತ್ರ ಬರೆದುಕೊಟ್ಟ ಮಸೀದಿಯ ಅಧ್ಯಕ್ಷರ ಈಗ 2 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ಈ ಪ್ರಕರಣ ದಾಖಲಿಸುವ ಪೂರ್ವದಲ್ಲಿ ನಾನು ದಾನಕೊಟ್ಟ ಮಸೀದಿ ಅಧ್ಯಕ್ಷರನ್ನು ದಾನಪತ್ರ ತಿದ್ದುಪಡಿ ಮಾಡಿದ ಬಗ್ಗೆ ವಿಚಾರಿಸಿಲ್ಲ.

ಆ ದಾನಪತ್ರ ಆಗುವ ಪೂರ್ವದಲ್ಲಿ ಮಸೀದಿಯಲ್ಲಿ ಉರ್ದು ಶಾಲೆ ನಡೆಯುತ್ತಿತ್ತು ಎಂದರೆ ಸರಿ ಅಲ್ಲ. 3 ನೇ ಆರೋಪಿಯ ಜಾಗದಲ್ಲಿ ಶಾಲೆ ನಡೆಯುತ್ತಿತ್ತು. ಮಸೀಲ ಕಮಿಟಿಯಲ್ಲಿ ಶಾಲೆಗೆ ಜಾಗ ದಾನ ಕೊಟ್ಟ ಶಾಲಾ ಕಟ್ಟಡ ಕಟ್ಟಿಸಬೇಕು ಎಂದು ತೀರ್ಮಾನಿಸಿದ್ದೇವು ಎಂದರೆ ಸರಿ. ಸರ್ಕಾರದಿಂದ ಶಾಲೆ ಕಟ್ಟಲು ಎಷ್ಟು ಅಳತೆ ಜಾಗ ಬೇಕು ಎಂದು ನಾವು ಮಾಹಿತಿ ಪಡೆದಿಲ್ಲ.

ದಾನಪತ್ರ ಆದ ನಂತರ ಸರ್ಕಾರದವರು ಒಂದು ಉರ್ದು ಶಾಲೆ ಕಟ್ಟಿದರು ಎಂದರೆ, ಒಂದು ಕೋಣೆ ಕಟ್ಟಿದರು. ಈಗ ಇರುವ ಉರ್ದು ಶಾಲೆ 135 ಅಡಿ ಉದ್ದ, ಅಗಲ 25 ಅಡಿ ನಮ್ಮ ಜಾಗ ಅತೀಕ್ರಮಿಸಿ ಕಟ್ಟಿದ್ದಾರೆ ಈಗ ಉರ್ದು ಶಾಲೆಯಲ್ಲಿ ಎಷ್ಟು ಕೋಣೆಗಳು ಇವೆ ಈಗ ನಾನು ನೋಡಿಲ್ಲ. ಈಗ ಉರ್ದು ಶಾಲೆ ನೆಲಮಹಡಿ ಮತ್ತು ಒಂದನೇ ಮಹಡಿ ಕಟ್ಟಡ ಇದೆ ಎಂದರೆ ಸರಿ. ನೆಲಮಹಡಿಯನ್ನು ಕಟ್ಟಿ 2003-04 ನೇ ಸಾಲಿನಲ್ಲಿ ಕಟ್ಟಿರಬಹುದು. ಸಾಕ್ಷಿಯು ಅದನ್ನು ಹಂತ ಹಂತವಾಗಿ ನಾವು ತಕರಾರು ಮಾಡಿದರೂ ಸಹ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 1 ನೇ ಮಹಡಿಯನ್ನು 2013 ನೇ ಸಾಲಿನಲ್ಲಿ ಕಟ್ಟಿದ್ದಾರೆ. ನೆಲಮಹಡಿಯ ಅಳತೆಯಂತೆ 1 ನೇ ಮಹಡಿಯನ್ನು ಕಟ್ಟಿದ್ದಾರೆ ಎಂದರೆ, ನನಗೆ ಮಾಹಿತಿ ಇಲ್ಲ. ಪೂರ್ವ-ಪಶ್ಚಿಮ 25 ಅಡಿ, ಉತ್ತರ-ದಕ್ಷಿಣ 135 ಅಡಿ ಕಟ್ಟಡ ಕಟ್ಟಿದ್ದಾರೆ. ಆ ಕಟ್ಟಡ ಸರ್ಕಾರಿ ಉರ್ದು ಶಾಲೆಗೆ ಸಂಬಂಧಿಸಿದ್ದು ಎಂದರೆ ಸರಿ.

ನೆಲಮಹಡಿ ಕಟ್ಟುವ ಸಂದರ್ಭದಲ್ಲಿ ಶಾಲಾ ಸುಧಾರಣಾ ಸಮಿತಿ ಇರಲಿಲ್ಲ, ನೇರವಾಗಿ ಸರ್ಕಾರದವರೇ ಕಟ್ಟಿದ್ದಾರೆ. ಉರ್ದು ಶಾಲೆ ಕಟ್ಟಡ ಕಟ್ಟಲು ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯನ್ನು ನಾನು ನೋಡಿಲ್ಲ. ಕಟ್ಟಡ ಕಟ್ಟುವ ಪೂರ್ವದಲ್ಲಿ ಕಟ್ಟಡದ ನೀಲಿನಕ್ಷೆಯನ್ನು ತಯಾರಿಸಿ ಅದರ ಪ್ರಕಾರ ಹಣದಾನ ಬಿಡುಗಡೆ ಮಾಡುತ್ತಾರೆ ಎಂದರೆ, ಆ ಪ್ರಕಾರ ಮಾಡಿರುವುದಿಲ್ಲ. ಸರ್ಕಾರದ ಅನುದಾನ ಪಡೆಯಲು ಈ ಎಲ್ಲ ಕ್ರಮಗಳನ್ನು ಅನುಸರಿಸುತ್ತಾರೆ ಎಂದರೆ ಸರಿ ಅಲ್ಲ ಎಲ್ಲ ನಿಯಮಗಳನ್ನು ಅನುಸರಿಸಿಯೇ ಸರ್ಕಾರದವರು ನೆಲಮಹಡಿಯನ್ನು ಕಟ್ಟಿದ್ದಾರೆ ಎಂದರೆ ಸರಿ ಅಲ್ಲ. ಎಷ್ಟು ಅಳತೆಯ ಕಟ್ಟಡ ಕಟ್ಟಿದ್ದಾರೆ ಎಂದು ಈ ಪ್ರಕರಣದಲ್ಲಿ ದಾಖಲೆ ಸಲ್ಲಿಸಿಲ್ಲ.

ದಾಖಲೆಯನ್ನು ತಿದ್ದುಪಡಿ ಮಾಡಿದ್ದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಮಾಹಿತಿ ಹಕ್ಕು ಅಡಿಯಲ್ಲಿ ಬಿಡಿಓ ಹತ್ತಿರ ದಾನಪತ್ರದ ನಕಲನ್ನು ಪಡೆದ ನಂತರ ತಿದ್ದುಪಡಿ ಮಾಡಿರುತ್ತಾರೆ ಎಂದು ಗೊತ್ತಾಗಿದೆ. ಆ ದಾಖಲೆಯನ್ನು ಬಿಇಓ ರವರು ದಾನಪತ್ರವನ್ನು ದೃಢೀಕರಿಸಿ ಕೊಟ್ಟಿರುತ್ತಾರೆ ಆ ಬಿಇಓ 1 ನೇ ಆರೋಪಿ ಇದ್ದರು. ಆ ದೃಢೀಕೃತ ನಕಲಿಗೆ 1 ನೇ ಆರೋಪಿಯ ಸಹಿ ಇದೆಯೋ

ಇಲ್ಲವೋ ಎಂದು ನಾನು ಖಚಿತಪಡಿಸಿಕೊಂಡಿಲ್ಲ. 1 ನೇ ಆರೋಪಿಯು ಯಾವ ರೀತಿ ಸಹಿ ಮಾಡುತ್ತಾರೋ ಎಂದು ನಾನು ತಿಳಿದುಕೊಂಡಿಲ್ಲ. 1 ನೇ ಆರೋಪಿಯು ನಕಲು ನೀಡಿದ್ದರಿಂದ ಅವರೇ ತಿದ್ದುಪಡಿ ಮಾಡಿರಬಹುದು ಎಂದು ತೀರ್ಮಾನಕ್ಕೆ ಬಂದಿದ್ದೇನೆ. ಆ ಸಂದರ್ಭದಲ್ಲಿ ಮಾಹಿತಿ ಹಕ್ಕು ಅಡಿಯಲ್ಲಿ ಯಾವ ಅಧಿಕಾರಿ ಇದ್ದರು ಎಂದು ನಾನು ತಿಳಿದುಕೊಂಡಿಲ್ಲ. ಎಲ್ಲ ಆರೋಪಿತರು ಸೇರಿ ದಾನಪತ್ರವನ್ನು ತಿದ್ದುಪಡಿ ಮಾಡಿದ್ದರಿಂದ ಈ ಪ್ರಕರಣವನ್ನು ದಾಖಲಿಸಿದ್ದೇನೆ ಮೂಲ ದಾನಪತ್ರ ಯಾರ ಬಳಿ ಇದೆ ಎಂದು ನಾನು ನೋಂದಣಿ ಕಛೇರಿಯಲ್ಲಿ ವಿಚಾರಿಸಿಲ್ಲ.

3 ಮತ್ತು 4 ನೇ ಆರೋಪಿತರು ನಾನು ದೂರು ಸಲ್ಲಿಸುವ ಸಂದರ್ಭದಲ್ಲಿ ಶಾಲಾ ಸುಧಾರಣಾ ಸಮಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಇದ್ದರು. ದಾನಪತ್ರ ತಿದ್ದುಪಡಿ ಮಾಡುವಲ್ಲಿ3 ಮತ್ತು 4 ನೇ ಆರೋಪಿತರು ಯಾವ ರೀತಿ ಭಾಗಿಯಾಗಿದ್ದರು ಎಂದು ನಾನು ತಿಳಿದುಕೊಂಡಿಲ್ಲ. ನಾನು ಈ ದೂರು ಸಲ್ಲಿಸುವಾಗ ಶಾಲಾ ಸುಧಾರಣಾ ಸಮಿತಿಯ ಸದಸ್ಯನಿದ್ದೆ ಎಂದರೆ ಸರಿ. 3 ನೇ ಆರೋಪಿಯ ಮುಂಚೆ ಸಲೀಂ ಅಹಮ್ಮದ್ ಎನ್ನುವವರು ಶಾಲಾ ಸುಧಾರಣಾ ಸಮಿತಿಯ ಅಧ್ಯಕ್ಷರು ಇದ್ದರು. ಆ ಮೊದಲು ಆ ಸಮಿತಿ ಇರಲಿಲ್ಲ. ಆರೋಪಿತರು ಯಾವುದೇ ದಾನಪತ್ರವನ್ನು ತಿದ್ದುಪಡಿ ಮಾಡದೇ ಇದ್ದರೂ ಸಹ ಅನುದಾನದ ಹಣದಲ್ಲಿ ನನಗೆ ಹಣ ಕೊಡದೇ ಇರುವ ಕಾರಣ ಆರೋಪಿತರ ವಿರುದ್ಧ ಸುಳ್ಳುಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿ ಅಲ್ಲ. ಬಿಇಓ ಕಛೇರಿಯಲ್ಲಿರುವ ವ್ಯವಸ್ಥಾಪಕರು ಮತ್ತು ನಾನು ಸೇರಿ ದಾಖಲೆಯನ್ನು ಸೃಷ್ಟಿಸಿ ತೆಗೆದುಕೊಂಡು ಬಂದಿದ್ದೇವೆ ಎಂದರೆ ಸರಿ ಅಲ್ಲ.

ಮಾಹಿತಿ ಹಕ್ಕು ಅಡಿಯಲ್ಲಿ ಪಡೆದ ದಾನಪತ್ರದ ನಕಲಿಗೆ 1 ನೇ ಆರೋಪಿಯ ಸಹಿ ಇರುವುದಿಲ್ಲ, ಅವರ ಕಛೇರಿಯ ವ್ಯವಸ್ಥಾಪಕರ ಸಹಿ ಇದೆ ಎಂದರೆ, ನನಗೆ ಗೊತ್ತಿಲ್ಲ. 1 ರಿಂದ 3 ನೇ ಆರೋಪಿತರು ಅವರ ಹುದ್ದೆಗೆ ಬರುವ ಪೂರ್ವದಲ್ಲಿ ಶಾಲೆಯಿಂದ ಸರ್ಕಾರಕ್ಕೆ ಪತ್ರ ವ್ಯವಹಾರ ಆದ ಪ್ರಕಾರ ಅನುದಾನ ಮಂಜೂರು ಆಗಿದೆ ಎಂದರೆ ಸರಿ ಅಲ್ಲ. 3 ಮತ್ತು 4 ನೇ ಆರೋಪಿತರು ಶಾಲಾ ಸುಧಾರಣಾ ಸಮಿತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಇದ್ದರು ಎಂದು ತೋರಿಸಲು ದಾಖಲೆ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.